ಬಂಗಾರಪೇಟೆ: ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಎಂ.ಎಸ್. ಶ್ರೀನಿವಾಸ ಅವರನ್ನು ಕಂದಾಯ ಮುಖ್ಯಮಂತ್ರಿ ಕೃಷ್ಣ ಬೈರೇಗೌಡ ಹಾಗೂ ಕಳ್ಳರದ ಭೂಷ್ಣ ಟಿ.ಎ. ನಾರಾಯಣಗೌಡರ ಅಧಿಮಾನಿ ಬಳಗದ ಮುಖಂಡರಾದ ವಿ.ಮುನಿಸ್ವಾಮಿ, ಕಗಂಬಲೆಟ್ ವೆಂಕಟಪ್ಪ ಮತ್ತು ಕಾರಹಳ್ಳಿ ಶೇಖರ್ ಅವರು ಶುಭಾಶಯ ಹೇಳಿದರು.

ಶೀಘ್ರದಲ್ಲೇ ನಿವೇಶನ ರಹಿತರಿಗೆ ಹಕ್ಕುಪತ್ರ ವಿತರಣೆ

ಗುಡಿಬಂಡೆ: ನನ್ನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ನಿವೇಶನ ರಹಿತರಿಗೆ ಅದಷ್ಟು ಶೀಘ್ರವಾಗಿ ನಿವೇಶನಗಳ ಹಕ್ಕುಪತ್ರಗಳನ್ನು ಹಂಚಿಕೆ ಮಾಡಲು ಅಗತ್ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಶಾಸಕ ಎಸ್. ಎನ್. ಸುಬ್ಬಾರೆಡ್ಡಿ ಭರವಸೆ ನೀಡಿದರು.

ಪಟ್ಟಣದ ವೃದಾಸಿ ಮಂದಿರದಲ್ಲಿ ನಡೆದ ತಾಲೂಕಿನ ಎಂಟು ಗ್ರಾಮ ವ್ಯಾಪ್ತಿಯಲ್ಲಿನ ಅರ್ಹವೃದ್ಧರಿಗೆ ಕಾಮಗಾರಿಗಳ ಕುರಿತು ಮುಖಂಡರೊಂದಿಗೆ ನಡೆದ ಚರ್ಚಾ ಸಭೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕರು, ತಮ್ಮ ಕ್ಷೇತ್ರ ವ್ಯಾಪ್ತಿಯ ಬಾಗೇಪಲ್ಲಿ, ಗುಡಿಬಂಡೆ ಹಾಗೂ ಚೇಳೂರು ತಾಲೂಕುಗಳಲ್ಲಿ ಸುಮಾರು 40 ಸಾವಿರ ಮನೆಗಳನ್ನು ಆನಿಧಿಕೃತವಾಗಿ ನಿರ್ಮಿಸಲಾಗಿದೆ. ಎಲ್ಲಾ ಮನೆಗಳಿಗೆ ಹಕ್ಕುಪತ್ರ ಹಾಗೂ ಖಾತೆ ಮಾಡಿಕೊಡುವ ಕೆಲಸ ಮಾಡುತ್ತಿದೆ. ಈಗಾಗಲೇ ನಿವೇಶನ ರಹಿತರ ಪಟ್ಟಿಯನ್ನೂ ಸಿದ್ಧಪಡಿಸಲಾಗಿದ್ದು ಅದಷ್ಟು ಶೀಘ್ರವಾಗಿ ನಿವೇಶನಗಳ ಹಕ್ಕುಪತ್ರಗಳನ್ನು ವಿತರಣೆಮಾಡುವುದು ಎಂದರು.

ಗುಡಿಬಂಡೆ ಮುಖ್ಯ ರಸ್ತೆಯಲ್ಲಿ ನಿವೇಶನ ಕಳೆದುಕೊಂಡವರಿಗೆ ನಿವೇಶನ ನೀಡಲು ಬಹಿರಾಸಿ ಗುರುತಿಸಲಾಗಿದ್ದು ನಿವೇಶನ ನೀಡಲು ಸಿದ್ಧತೆ ನಡೆಯಿತ್ತಿದೆ. ಮುಂದಿನ ಮೂರು ತಿಂಗಳ ಒಳಗೆ ಎಲ್ಲರಿಗೂ ನಿವೇಶನ ನೀಡಲು ಅಗತ್ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು. ತಹಶೀಲ್ದಾರ್ ಸಿಗ್ಬತುಲ್ಲಾ ತಾವಂ ಇ.ಒ ನಾಗಮಣಿ, ವಿವಿಧ ಗ್ರಾಮಗಳ ಮುಖಂಡರು, ಸಾರ್ವಜನಿಕರು ಸೇರಿದಂತೆ ಹಲವರು ಹಾಜರಿದ್ದರು.

ಕೋಲಾರ ಜಿಲ್ಲೆಯಲ್ಲಿ ಬರದ ಛಾಯೆ | ಸಂಕಷ್ಟಕ್ಕೆ ಸಿಲುಕಿರುವ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರು

ಹಾಲಿನ ಪ್ರೋತ್ಸಾಹ ದರ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ

ಉದಯಕಾಲ ನ್ಯೂಸ್, ಕೋಲಾರ: ಜಿಲ್ಲೆಯಲ್ಲಿ ಬರ ಆವರಿಸಿದೆ. ಜನಸಾಮಾನ್ಯರಿಗೆ ಮೇವಿನ ಸಮಸ್ಯೆ ಎದುರಾಗಿದೆ. ಪಶು ಆಹಾರ ಬೆಲೆಯೂ ಗಗನಕ್ಕೇರಿದೆ. ಜಿಲ್ಲೆಯ ಜೀವನಾಡಿಯಾದ ಹೈನುಗಾರಿಕೆ ಹಾಲಿನ ಪ್ರೋತ್ಸಾಹ ಧನ ಹೆಚ್ಚಿಸಬೇಕು ಒತ್ತಾಯಿಸಿ ಕೋಮುಲ್ ನಿರ್ದೇಶಕರು ಮತ್ತು ಹಾಲು ಉತ್ಪಾದಕರು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರವನ್ನು ಒತ್ತಾಯಿಸಿ ಅವರ ಜಿಲ್ಲಾಧಿಕಾರಿ ಎನ್. ಎಂ.ಮಂಗಳಾ ಮೂಲಕ ಮನವಿ ಸಲ್ಲಿಸಲಾಯಿತು.

ಬುಧವಾರ ಜಿಲ್ಲಾಧಿಕಾರಿ ಕಚೇರಿ ಮುಂದೆ ಜಿಲ್ಲಾಧ್ಯಕ್ಷ ಹಾಲು ಉತ್ಪಾದಕರು ಪಕ್ಷಾತೀತವಾಗಿ ಸಾಲೂರಾಯ ಸಂಪ್ರಯಿಲ್ಲ ಎಮಾವತಿಗೆಗೊಂಡು ನಿರ್ದೇಶಕರ ಮೂಲಕ ಸರ್ಕಾರವನ್ನು ಒತ್ತಾಯಿಸಿದರು.

ಕೋಮುಲ್ ನಿರ್ದೇಶಕ ಜಯಸಿಂಹಾಚ್ಚನ್ ಮಾತನಾಡಿ, ಪಶು ಆಹಾರದಲ್ಲಿ ಹಿಂಡಿ, ಬೂಸಾ, ಚೆಕ್ಕೆ ಬೆಲೆ ಗಗನಕ್ಕೇರಿದೆ. ಬರ ಆವರಿಸಿರುವುದರಿಂದ ಹಸಿಗಾಗಿಗೆ ಹಸು ಮೇವು ಮತ್ತು ಒಣ ಮೇವು ಸಿಗದಂತೆ ಆಗಿದೆ. ಜನಸಾಮಾನ್ಯರಿಗಷ್ಟು ಸಾಕುವುದೇ ಕಷ್ಟದ ಸಮಸ್ಯೆ ಆಗಿದೆ. ಸರ್ಕಾರ ಕೂಡಲೇ ಸ್ಪಂದಿಸಿ, ರಿಯಾಯಿತಿ ದರದಲ್ಲಿ ಪಶು ಆಹಾರ ಮತ್ತು ಮೇವನ್ನು ಒದಗಿಸಬೇಕು. ಜೊತೆಗೆ ಹಾಲಿನ ಬೆಲೆ ಹೆಚ್ಚಳ ಮಾಡಬೇಕೆಂದು ಒತ್ತಾಯಿಸಿದರು.

ನಿರ್ದೇಶಕ ಕಾಡೇನಹಳ್ಳಿ ನಾಗಾಸಾಗರ ಮಾತನಾಡಿ, ಬೇರೆ ರಾಜ್ಯಗಳಲ್ಲಿ ಹಾಲಿನ ಬೆಲೆ 1 ಲೀಟರಿಗೆ ಉತ್ಪಾದಕರಿಗೆ 40 ರಿಂದ 60 ರೂ. ಸಿಗುತ್ತಿದೆ. ಆದರೆ, ನಮ್ಮಲ್ಲಿ 34 ರೂ.ಗಳನ್ನು ಮಾತ್ರ ನೀಡಲಾಗುತ್ತಿದೆ. ಉತ್ಪಾದಕರಿಗೆ ನಮ್ಮಲ್ಲಿ 10 ರೂ.ಗಳನ್ನು ಹೆಚ್ಚುವರಿಯಾಗಿ ನೀಡಬೇಕು. ಹಾಲಿನ ಖರೀದಿ ಬೆಲೆಯೂ ಹೆಚ್ಚಳವಾಗಬೇಕು. ಮುಖ್ಯಮಂತ್ರಿಗಳು ರೈತ ಕುಟುಂಬದಿಂದ ಬಂದವರಾಗಿರುವ ಕಾರಣ ಕೂಡಲೇ ಹಾಲಿನ ಪ್ರೋತ್ಸಾಹ ಧನವನ್ನು 5 ರೂ.ಗಳಿಂದ 7 ರೂ.ಗಳಿಗೆ ಹೆಚ್ಚಳಮಾಡಬೇಕೆಂದು ಒತ್ತಾಯಿಸಿದರು.

ನಿರ್ದೇಶಕ ಸಾಮಗಾನೆ ಮಾತನಾಡಿ, ಜಿಲ್ಲೆಯ ರೈತರು ಹೈನುಗಾರಿಕೆಯನ್ನು ನಂಬಿ ಬದುಕುತ್ತಿದ್ದಾರೆ. ಬರ ಆವರಿಸಿರುವುದಂದ ಇತ್ತೀಚೆಗೆ ಹಾಲು ಶೇಖರಣೆ ಇಳಮುಖವಾಗುತ್ತಿದೆ. ಪ್ರತಿದಿನ 9.5 ಲಕ್ಷ ಲೀಟರ್ ಸಂಗ್ರಹವಾಗುತ್ತಿದ್ದ ಹಾಲು ಈಗ ಪ್ರತ್ಯಕ್ಷ 1.5 ಲಕ್ಷ ಹಾಲು ಕಡಿಮೆಯಾಗಿದೆ. ಇದೂಂದ ಉತ್ಪಾದಕರಿಗೆ ಭಾರೀ ಹೊಡೆತ ಬಿದ್ದಿದೆ. ಹಾಲು ಉತ್ಪಾದಕರು ಸೆಣಿಗೆ ಬಂದು ಮುಸ್ಸಂದೆ ಸರ್ಕಾರ ಎಚ್ಚೆತ್ತುಕೊಂಡು ಪಶು ಆಹಾರ ಬೆಲೆಗಳಿಗೆ ರಿಯಾಯಿತಿ ನೀಡುವ ಮೂಲಕ ಹಾಲಿನ ಬೆಲೆಯಾದ್ರು ಏರಿಕೆ ಮಾಡಬೇಕೆಂದು ಒತ್ತಾಯಿಸಿದರು.

ನಿರ್ದೇಶಕ ಕೆ.ಕೆ.ಮಂಜುನಾಥ್ ಮಾತನಾಡಿ, ಹಾಲಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನ 7 ರೂ.ಗಳಿಗೆ ಹೆಚ್ಚಳವೇಕು. ಹಾಗೆಯೇ ಖರೀದಿ ದರವನ್ನು 10 ರೂ.ಗಳಿಗೆ ಹೆಚ್ಚಳಮಾಡಬೇಕು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಹಾಲು ಉತ್ಪಾದಕರ ಉಪಸ್ಥಿತರಿದ್ದರು.

ಕುಡಿಯುವ ನೀರಿನ ಬೆಲೆ 30 ರೂ.ಗಳು, ಕಬ್ಬಿನ್ನು ಹಾಗುಗಳನ್ನು ಸಾಕಿ ಹಾಲು ಹಾಕಿದರೆ 34 ರೂ.ಗಳು. ಇದು ಯಾವ ನ್ಯಾಯ?. ಬರಗಾಲದಲ್ಲಿ ಹೈನುಗಾರಿಕೆ ಉಳಿಯಬೇಕಾಗಿದೆ. ಕೋಲಾರ ಜಿಲ್ಲೆಯ ರೈತರ ಜೀವನಾಡಿಯಾಗಿರುವ ಹೈನುಗಾರಿಕೆ ಉಳಿದರೆ ಮಾತ್ರ ರೈತರ ಬದುಕು ಸಾಧ್ಯಕಾವಾಗುತ್ತದೆ. ಹಾಲಿನ ಬೆಲೆ ಹೆಚ್ಚಿಸಿ ಹೈನುಗಾರಿಕೆಯನ್ನು ಉಳಿಸಬೇಕಾಗಿದೆ.

ಚಂದಮಿಲೆ ರಮೇಶ್, ಕೋಮುಲ್ ನಿರ್ದೇಶಕ

ಪಕ್ಷಾತೀತವಾಗಿ ಸಾವಿರಾರು ಸಂಖ್ಯೆಯಲ್ಲಿ ಹಾಲು ಉತ್ಪಾದಕರು ಎಮಾವತಿಗೆಗೊಂಡು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಸರ್ಕಾರ ಹಾಲು ಉತ್ಪಾದಕರ ಕಷ್ಟಗಳಿಗೆ ಸ್ಪಂದಿಸಬೇಕು. ಕೋಲಾರ ಜಿಲ್ಲೆಯ ರೈತರ ಪ್ರತಿಭಟನೆಗೆ ಅಧಿಕೃತಕ್ಕೆ ಮುಟ್ಟಿಸೋಣ. ಮುಖ್ಯಮಂತ್ರಿಗಳು ಕೂಡಲೇ ಸ್ಪಂದಿಸಲಿ.

ಎಸ್.ಮುನಿಸ್ವಾಮಿ, ಮಾಜಿ ಸಂಸದ

ನೀಡಬೇಕೆಂದು ಒತ್ತಾಯಿಸಿದರು.

ನಿರ್ದೇಶಕರಾದ ನಾಗಾಸಾಗರ ಮಾಲೂರು ಶ್ರೀನಿವಾಸ್ ಹಾಮಾಜಿಗ ಸೆಣಿರುತ್ತಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಹಾಲು ಉತ್ಪಾದಕರ ಉಪಸ್ಥಿತರಿದ್ದರು.

ದುರಸ್ತಿ ಕಾಣದ ಶುದ್ಧ ಕುಡಿಯುವ ನೀರಿನ ಘಟಕ!

ಡಿ.ವಿ. ಮಂಜುನಾಥ್

ಬಾಗೇಪಲ್ಲಿ: ಪಟ್ಟಣದ ಹೃದಯಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವು ಕಳೆದ ಹಲವು ದಿನಗಳಿಂದ ಕೆಟ್ಟು ಹೋಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ನಿರ್ಲಕ್ಷ್ಯ ಧೋರಣೆಗೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ದಿನನಿತ್ಯ ನೂರಾರು ಸಾರ್ವಜನಿಕರು, ಖಾಸಗೀರು ಬರುವ ವ್ಯಯಗಾರರು ಮತ್ತು ವಾದಾಜಾಗಳು ಕುಡಿಯುವ ನೀರಿಗಾಗಿ ಈ ಘಟಕವನ್ನೇ ಅವಲಂಬಿಸಿದ್ದರು. ಆದರೆ, ಹಲವು ದಿನಗಳಿಂದ ಈ ಘಟಕವು ಬಂದ್ ಆಗಿದೆ. ಇದರಿಂದಾಗಿ ಸಾರ್ವಜನಿಕರು ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ.

ಪಟ್ಟಣದ ಪ್ರಮುಖ ಸ್ಥಳವೆನ್ನಿ ಇರುವ ಘಟಕ ಕೆಟ್ಟು ಹೋಗಿದ್ದರೂ ಸಂಬಂಧಪಟ್ಟ ಪುರಸಭೆ/ತಾಲೂಕು ಆಡಳಿತ ಅಧಿಕಾರಿಗಳು ಹಾಗೂ ಇದರ ನಿರ್ವಹಣೆ ಮಾಡಿಕೊಡುತಿರುವ ಗುತ್ತಿಗೆದಾರರು ದುರ್ಲಕ್ಷಿಸಿರುವ ಯಾವುದೇ ಕ್ರಮ ಕೈಗೊಂಡಿಲ್ಲ. ಸ್ಥಳೀಯರು ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ತಕ್ಷಣವೇ ಸಂಬಂಧಪಟ್ಟ ಮೇಲಾಧಿಕಾರಿಗಳು ಗಮನಹರಿಸಿ, ದುರ್ಲಕ್ಷಿಗರಾಗಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ನೋಂದಣಿ ಅಭಿಯಾನ

ಮುಳಗುಂದ: ನಗರದ ಸರ್ಕಾರಿ ವೆದಿಯ ಪೂರ್ವ ಕಾಲೇಜಿನಲ್ಲಿ ಭಾರತ್ ಯೋಗೇಂಗ ಯುವ ಸಂಘಕ್ಕೆ ವಿದ್ಯಾರ್ಥಿಗಳ ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ವಿದ್ಯಾರ್ಥಿಗಳಲ್ಲಿನ ಕೌಶಲ್ಯಾಭಿವೃದ್ಧಿ, ಸಮುದಾಯದ ಅಭಿವೃದ್ಧಿ, ಯುವ ಸಬಲೀಕರಣ, ಕ್ರೀಡೆ ಮತ್ತು ಕ್ಷೇತ್ರ, ಅರಣ್ಯ ಮತ್ತು ಪರಿಸರ ಸಂರಕ್ಷಣೆ, ಆರೋಗ್ಯ ಮತ್ತು ಮೌಲ್ಯಗಳ, ಸಂಸ್ಕೃತಿ ಮತ್ತು ಸಾಮಾಜಿಕ ಸಾಮರಸ್ಯ ಬಗ್ಗೆ ಸುಮಿತ ರಿಜಸ್ ಈ ಅಭಿಯಾನದ ಮೂಲ ಉದ್ದೇಶ. ಇದಕ್ಕಾಗಿ ನೋಡಲ್ ಇಂಜಿನಿಯರ್ ಡಾ. ವಾಣೀಶ್ ಕುಮಾರ್ ಇದ್ದರು.

ವಿದ್ಯಾರ್ಥಿನಿಯರಿಂದ ನೀರು ತರಿಸಿದ ಶಾಲೆ ಆಡಳಿತ!

ಉದಯಕಾಲ ನ್ಯೂಸ್, ಚಿತ್ರದುರ್ಗ: ನಗರದ ಹೃದಯ ಭಾಗದಲ್ಲಿರುವ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಂದಲೇ ನೀರು ತರಿಸಲಾಗುತ್ತಿದೆ ಎಂಬ ಆರೋಪ ಕೇಳಬಂದಿದ್ದು, ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಶಾಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿಲ್ಲದ ಹಿನ್ನೆಲೆ ಮಳ್ಳು ಜನರಾಲೆ ಮುಂಭಾಗದಿಂದ ನೀರನ್ನು ಹೊತ್ತು ಶಾಲೆಗೆ ಸಾಗಿಸುತ್ತಿರುವ ದೃಶ್ಯ ಕಂಡುಬಂದಿದೆ. ಕೋಟೆ ಶಾಲೆಯ ವಿದ್ಯಾರ್ಥಿಗಳು ಶಾಲೆಯ ಅಗತ್ಯಕ್ಕಾಗಿ ನೀರು ಹೊತ್ತೊಯ್ತಿರುವುದು ಸಾರ್ವಜನಿಕರ ಗಮನ ಸೆಳೆದಿದೆ.

ಮಳ್ಳನ್ನು ಸರ್ಕಾರಿ ಶಾಲೆಗೆ ಕಳುಹಿಸುವುದು ನೀರು ತುಂಬುವುದಕ್ಕೋ, ಶಿಕ್ಷಣ ಕಲಿಯುವುದಕ್ಕೋ? ಎಂಬ ಪ್ರಶ್ನೆಯನ್ನು ಪೋಷಕರು ಹಾಗೂ ಸಾರ್ವಜನಿಕರು ಕೇಳುವಂತಾಗಿದೆ. ಈಗಾಗಲೇ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುವುದು ಸಾರ್ವಜನಿಕರ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದಲೇ ಇಂತಹ ಕೆಲಸ ಮಾಡಿಸುವುದು ಶಾಲಾ ವ್ಯವಸ್ಥೆಯ ಬಗ್ಗೆ ಮತ್ತಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಇದೇ ವೇಳೆ ಶಾಲೆಯಲ್ಲಿನ ಪರಿಸ್ಥಿತಿಯನ್ನು



ಚಿತ್ರೀಕರಿಸಲು ತೆರಳಿದ ಪತ್ರಕರ್ತರೊಂದಿಗೆ ಮುಖ್ಯ ಶಿಕ್ಷಕಿ ಮೋಹನ್ ಅವರು ದರ್ಪದಿಂದ ವರ್ತಿಸಿದ್ದಾರೆ ಎಂದು ಆರೋಪವೂ ಕೇಳಿಬಂದಿದೆ. ನನ್ನ ಆಗಮನಿತೆ ಇಲ್ಲಿನ ಶಾಲೆಯೊಳಗೆ ಬರಲು ನಿಮಗೆ ಯಾರು ಪರ್ಮಿಷನ್ ಕೊಟ್ಟರು ಎಂದು ಪ್ರಶ್ನಿಸಿದ್ದಾರೆ ಎನ್ನಲಾಗಿದೆ.

ವಿದ್ಯಾರ್ಥಿಗಳಿಗೆ ಮೂಲ ಸೌಲಭ್ಯ ಕಲ್ಪಿಸುವ ಜವಾಬ್ದಾರಿ ಯಾರದ್ದು ಎಂಬುದನ್ನು ಶಿಕ್ಷಣ ಇಲಾಖೆ ಸ್ಪಷ್ಟಪಡಿಸಬೇಕಿದೆ.

ಮಕ್ಕಳಿಂದ ನೀರು ಹೊರೆತ್ತಿರುವುದ ಆರೋಪದ ಕುರಿತು ಶಿಕ್ಷಣ ಇಲಾಖೆ ಅಧಿಕಾರಿಗಳು ಸ್ಪಂದಿಸಿ ಭೇಟಿ ನೀಡಿ ಪರಿಶೀಲನೆ ನಡೆಸಿ, ಶಾಲೆಯಲ್ಲಿ ಸರ್ಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಪೋಷಕರು ಹಾಗೂ ಸಾರ್ವಜನಿಕರ ಆಗ್ರಹವಾಗಿದೆ.

ಸೌಭಾಗ್ಯ ಫೂಡ್ಸ್ ಎಂಡ ಸ್ಟೂಡಾಸಿಯಾದ ಮತ್ತು ಸೊಂಬಾಗಿ ಸ ಮತ್ ಸ್ಟೂಡಾಸಿಯ, ಕೃಷ್ಣಾಪುರಿಗ,
ಮಂಡ್ಯ ಸಿಟಿ
ಅಗತ್ ಮಾರಾಟ ಸಂಖ್ಯೆ 93/2022
ದಾಖಲೆ ಸಾಲದ ಅಕ್ಕರ ನೀಡ ಮತ್ತಾದಾರ ಸಂಗಾತಿಗಳು ಬಂಬಳ್ಳ ಅಂದರೆ 17 ದಿನ ಕೊಡಬೇಕಾದ ಗ್ರಾಮ. ಕಸಾದ ಮೇಲೂ, ಕೃಷ್ಣಾಪುರಿಗ ಹಾಲ್ಲಿಸ, ಮಂಡ್ಯ ಸಿಟಿ
ವಿವರ
ಕ್ರಮಾಂಕಗಳು: 1) ಸಂಖ್ಯಾ ಮತ್ತು ಅಳತೆ 2) ಯಜಮಾನರು ಹೆಸರು ಮೇಲೆ ಕೃಷ್ಣಪ್ಪ, ಯಜಮಾನ ವಯಸ್ಸು 45 ವರ್ಷ 3). ಸಾಮಾನ್ಯಕ್ಕೆ ನೀಡ ಕೆಳಗೆ ಇಷ್ಟಕ್ಕೆ ಬಂಬಳ್ಳ ಸಂಖ್ಯೆ ಸಂಖ್ಯೆ 45 ವರ್ಷ 4). ಕೆಳಗೆ ಸಂಗಾತಿ ನೀಡ ಕೆಳಗೆ ಇಷ್ಟಕ್ಕೆ ಬಂಬಳ್ಳ ಸಂಖ್ಯೆ 4) ವರ್ಷ. 5) ಎಂಟ ಕೆಳ ಕ್ರಮಾಂಕಗಳು ಎಂಟ ಹೊಸಕೊಪ್ಪ ಗ್ರಾಮ. ಕಸಾದ ಸೂಚಿಗ, ಕೃಷ್ಣಾಪುರಿಗ ಹಾಲ್ಲಿಸ, ಮಂಡ್ಯ ಸಿಟಿ 1). ಮಾಡಿ ನೀಡ ಕೆಳಗೆ ಕೆಳಗ ಮೇಲೆಗೆ, ಬಂಬಳ್ಳ ಸಂಖ್ಯೆ ಸಂಖ್ಯೆ 46 ವರ್ಷ. ಸಂಗಾತಿ ಕೆಳಗೆ ಬಿಟ್ಟಿಗೆ ಕಸಾದ ಮೇಲೆಗೆ, ಸಂಗಾತಿ ಕೆಳಗೆ-16217
ಸಾರ್ವಜನಿಕ ಪ್ರಕಟಣೆ
ಈ ಮೇಲ್ಕಂಡ ನಮೂನೆಗಳ ಹಾಲಿಯ, ಪ್ರಾಮಾಣಿಕ ಎಂದು ನಮೂದ ಕೃಷ್ಣಪ್ಪ ಸಂಖ್ಯೆಯಲ್ಲಿ ನಿರ್ಗಮ್ಯ ಕಾಗದ ಸಾರ್ವಜನಿಕ ಕೆಳಗ ಎಂದ ಮಾಡಿ ಈ ಪ್ರಾಮಾಣಿಕ ಸಂಖ್ಯೆ ಎಂದ ಸೂಚಿಸಿ ಕೆಳಗೆ ಕಂಡಂತೆ ಸಂಖ್ಯೆ ಸಂಖ್ಯೆ ಎಂದ ಸೂಚಿಸಿ ಕೆಳಗ ಕೆಳಗ ಮೇಲೆ ಕೃಷ್ಣಪ್ಪ